ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ.

ವ್ಯವಸಾಯಗಾರರಿಗೆ ಮುಂಗಡ ಹಣ.

೧೪೪೨. ಶ್ರೀ ಬಿ. ಬಸವಲಿಂಗಪ್ಪ, (ಯಲಹಂಕ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೪ನೇ ಸಾಲಿನಿಂದ ರಾಜ್ಯದಲ್ಲಿನ ಸಹಕಾರ ಸಂಘಗಳ ಮುಖಾಂತರ ವಿವಿಧ ಯೋಜನೆಗಳ ನ್ವಯ ಕೃಷಿಕರಿಗೆ ನೀಡಲಾದ ಸಾಲದ ಮೊತ್ತ ವೆಷ್ಟು ?

ಆ) ಸಂಘಗಳಿಂದ ಪಡೆದ ಸಾಲವನ್ನು ಕೃಷಿಕರು ಕ್ರಮಬದ್ಧವಾಗಿ ಮರುಪಾವತಿ ಮಾಡಿದ್ದಾರೆಯೇ ?

ಇ) ರಾಜಣ್ಣದಲ್ಲಿನ ಬರಗಾಲ ಪರಿಸ್ಥಿತಿಯಿಂದಾಗಿ ಸಣ್ಣ ರೈತರು ಸುಸ್ತಿದಾರರಾಗಿದ್ದಾರೆಂಬುದು ನಿಜವೇ ?

ಈ) ಸಾಲ ಮರುಪಾವತಿ ಶಕ್ತಿಯನ್ನು ಕಳೆದುಕೊಂಡಂತಹ ಸಣ್ಣ ರೈತರ, ಸಾಲ ಮೊಬಲಗನ್ನು ಮನ್ನಾ ಮಾಡುವ ಆಲೋಚನೆ ಇದೆಯೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ೧೯೮೪–೮೫ನೇ ಆರ್ಥಿಕ ವರ್ಷದಿಂದ ಸಹಕಾರ ಸಂಘಗಳು ನೀಡಿದ ಸಾಲದ ವಿವರವು ಈ ಕೆಳಗಿನಂತಿರುತ್ತದೆ.

(ರೂ. ಲಕ್ಷಗಳಲ್ಲಿ)

ಆರ್ಥಿಕ ವರ್ಷ	ಸಾಲದ ಬಗ್ಗೆ	ವಿತರಿಸಲಾದ ಮೊತ್ತ
೧	೨	೩
೧೯೮೪–೮೫	ಅಲ್ಪಾವಧಿ	೧೯೧೮–೨೪
	ಮಧ್ಯಮಾವಧಿ	೧೦೧೧–೫೩
	ದೀರ್ಘಾವಧಿ	೪೮೧೬–೭೧
	ಒಟ್ಟು	೧೬೭೪–೮೮
೧೯೮೫–೮೬	ಅಲ್ಪಾವಧಿ	೧೦೨೯–೪೪
	ಮಧ್ಯಮಾವಧಿ	೬೮೩–೭೦
	ದೀರ್ಘಾವಧಿ	೪೬೮–೯೧
	ಒಟ್ಟು	೧೫೬೬–೯೪
೧೯೮೬–೮೭ (೩೧–೧೨–೮೬ಕ್ಕೆ)	ಅಲ್ಪಾವಧಿ	೮೯೫–೧೨
	ಮಧ್ಯಮಾವಧಿ	೬೫೯–೫೨
	ದೀರ್ಘಾವಧಿ	೪೦೭೯–೩೫
	ಒಟ್ಟು	೧೩೬೪೦–೯೯